SC 26/23
PW.7

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**<u>ಸೆಷನ್ಸ್ ಕೇಸ್ ನಂಃ 26/2023</u>** **<u>ಅ.ಸಾ.7</u>**

**<u>ಚಾ.ಸಾ.12</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಪ್ರಶಾಂತ್ ಆಚಾರ್ |
| ತಂದೆಯ ಹೆಸರು | - | ಕೃಷ್ಣ ಆಚಾರ್ |
| ವಯಸ್ಸು | - | 41 ವರ್ಷ |
| ಉದ್ಯೋಗ | - | ಅಕ್ಕಸಾಲಿಗ |
| ವಿಳಾಸ | - | ಬನ್ನಾಡಿ, ಬ್ರಹ್ಮಾವರ ತಾಲೂಕು. |

ದಿನಾಂಕಃ 25-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

ಬ್ರಹ್ಮಾವರ ತಾಲೂಕಿನ ಕೋಟಾ ಎಂಬಲ್ಲಿ ಶ್ರೀ ದುರ್ಗಾ ಜ್ಯುವೆಲ್ಲರೀಸ್ ಎಂಬ ಚಿನ್ನದ ಆಭರಣ ತಯಾರಿಸುವ ಅಂಗಡಿಯನ್ನು ಕಳೆದ 9 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದೇನೆ. ನನಗೆ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಪರೀಕ್ಷಿಸಿ ಅವುಗಳ ಗುಣಮಟ್ಟ ಕಂಡು ಹಿಡಿಯುವ ಅನುಭವ ಕಳೆದ 25 ವರ್ಷಗಳಿಂದ ಇದೆ. ಸುಮಾರು ನಾಲ್ಕು ವರ್ಷದ ಹಿಂದೆ ವೃತ್ತ ನಿರೀಕ್ಷಕರು, ಉಡುಪಿ ಇವರು ನನ್ನನ್ನು ಠಾಣೆಗೆ ಕರೆಸಿದ್ದು ಸುಮಾರು 5-00 ಗಂಟೆ ಹೊತ್ತಿಗೆ ನಾವು ವೃತ್ತ ಕಚೇರಿಯಿಂದ ಪಂಚರು, ಪೋಲಿಸರು ಮತ್ತು ಆರೋಪಿತರೊಂದಿಗೆ ಭಟ್ಕಳ-ಕುಂದಾಪುರ ಮಾರ್ಗವಾಗಿ ಬೆಳಗಾವಿಗೆ ಹೋಗಿ ಗುರ್ಲಾಪುರಕ್ಕೆ ಹೋಗಿ ಮಲ್ಲಿಕಾರ್ಜುನ ದೇವಸ್ಥಾನದ ಬಳಿ ವಾಹನವನ್ನು ನಿಲ್ಲಿಸಿ ಆರೋಪಿತರ ಮನೆಯ ಬಳಿ ಹೋಗಿ ಮನೆಯ ಹಿಂದುಗಡೆ ಜೋಳದ ಗದ್ದೆ ಯಲ್ಲಿ ಹೂತಿಟ್ಟಿದ್ದ ಚಿನ್ನಾಭರಣ ಹಾಗೂ ನಗದನ್ನು ಆರೋಪಿತರು ತೆಗೆದು ಹಾಜರುಪಡಿಸಿದ್ದು ಹಳದಿ ಚೀಲದಲ್ಲಿ ಎರಡು ಪ್ಯಾಕೇಟ್ ಗಳು ಇದ್ದು ಒಂದು ಪ್ಯಾಕೇಟ್ ನಲ್ಲಿ 9, ಇನ್ನೊಂದರಲ್ಲಿ 6 ಆಭರಣಗಳು ಇದ್ದು ಅವುಗಳನ್ನು ನಾನು ಪರೀಕ್ಷೆ ಮಾಡಿ ನೋಡಲಾಗಿ ಅವುಗಳು ಬಂಗಾರದ ಆಭರಣಗಳಾಗಿದ್ದವು ಎಂದು ದೃಢೀಕರಿಸಿರುತ್ತೇನೆ. ಆಭರಣದೊಂದಿಗೆ ನಗದು ಹಣ ಸಹಾ ಹಾಜರು

ಪಡಿಸಿರುತ್ತಾರೆ.ಈ ಬಗ್ಗೆ ಪೋಲಿಸರು ಅದೇ ಸ್ಥಳದಲ್ಲಿ ಒಂದು ಮಹಜರನ್ನು ತಯಾರಿಸಿದ್ದು ಅದನ್ನು ಈಗಾಗಲೇ ನಿಪಿ.14 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ14(ಸಿ)ಎಂದು ಮೂಲ ಎಸ್ ಸಿ ನಂ.1/2021 ರಲ್ಲಿ ಗುರುತಿಸಲಾಗಿದ್ದು, ದೃಢೀಕೃತ ಪ್ರತಿಯನ್ನು ಈ ಪ್ರಕರಣದಲ್ಲಿ ಈಗಾಗಲೇ ನಿಪಿ-14 ಎಂದು ಗುರುತಿಸಲಾಯಿತು. ನಮ್ಮೊಂದಿಗೆ ಬಂದಿದ್ದ ಎರಡನೇ ಆರೋಪಿಯನ್ನು ಈಗ ವೀಡಿಯೋ ಕಾನ್ಫರೆನ್ಸ್ ಮೂಲಕ ನೋಡುತ್ತಿದ್ದು ಆತನೇ ಎರಡನೇ ಆರೋಪಿ ಎಂದು ಗುರುತಿಸಿದ್ದೇನೆ. ಅಂದು ಪೋಲಿಸರು ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳ ಛಾಯಾ ಚಿತ್ರವನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದೆ. ಸ್ಥಳದಲ್ಲಿ ತೆಗೆದ ಛಾಯಾ ಚಿತ್ರಗಳನ್ನು ಈಗಾಗಲೇ ನಿಪಿ.22 ರಿಂದ 27 ಎಂದು ಗುರುತಿಸಲಾಗಿದೆ. ಎರಡು ಪ್ಲಾಸ್ಟಿಕ್ ತೊಟ್ಟೆ ಮತ್ತು ಒಂದು ಹಳದಿ ಬಣ್ಣದ ಚೀಲವನ್ನು ಈಗಾಗಲೇ ಎಂಒ-7 ಎಂದು ಗುರುತಿಸಲಾಗಿದೆ. ಅಮಾನತ್ತುಪಡಿಸಿಕೊಂಡ ಬಂಗಾರದ ಆಭರಣಗಳ ತೂಕ ಮತ್ತು ಮೌಲ್ಯದ ಬಗ್ಗೆ ಒಂದು ದೃಢೀಕರಣ ಪತ್ರವನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ಆ ದೃಢೀಕರಣ ಪತ್ರದ ಮೂಲ ಪ್ರತಿಯನ್ನು ನಿಪಿ.28 ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಮೂಲ ಎಸ್ ಸಿ ನಂ.1/2021 ರಲ್ಲಿ ಗುರುತಿಸಲಾಗಿದೆ ಅದರ ದೃಢೀಕೃತ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.28 ಎಂದು ಗುರುತಿಸಲಾಯಿತು. ಆರೋಪಿಯನ್ನು ಈ ದಿನ ಸಾಕ್ಷಿ ವೀಡಿಯೋ ಕಾನ್ಫರೆನ್ಸ್ಮೂಲಕ ನೋಡಿ ಗುರುತಿಸಿರುತ್ತಾರೆ.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಆರ್.ಪಿ. ವಕೀಲರಿಂದಃ**

ಪೋಲಿಸರು ನನಗೆ ಕರೆ ಮಾಡಿ ಗುರ್ಲಾಪುರಕ್ಕೆ ಹೋಗಲು ಇರುವುದರಿಂದ ಅವರೊಂದಿಗೆ ಹೋಗಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ಚಾಸಾ.4 ಇವರು ನನ್ನ ಅಂಗಡಿಯ ಪಕ್ಕದಲ್ಲಿ ಮನೆ ಹೊಂದಿದ್ದಾರೆ. ಅವರ ಅತ್ತೆಯ ಕೊಲೆಯಾಗಿದ್ದು, ಆರೋಪಿತರು ಮತ್ತು ಚಿನ್ನ ಸಿಕ್ಕಿರುವುದರಿಂದ ಪೋಲಿಸರೊಂದಿಗೆ ಸ್ಥಳ ಹೋಗಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ಒಂದು ಇಲಾಖಾ ಜೀಪು ಮತ್ತು ಬಾಡಿಗೆ ವಾಹನದಲ್ಲಿ ಹೋಗಿರುತ್ತೇವೆ. ನಾನು ಬಾಡಿಗೆ ವಾಹನದಲ್ಲಿ ಇದ್ದೆ. ನಾವು ಇನೋವಾ ವಾಹನದಲ್ಲಿ ಮತ್ತು ಪೋಲಿಸರು ಇಲಾಖಾ ಜೀಪಿನಲ್ಲಿ ಇದ್ದರು. ಅವರನ್ನು ಹೊರತುಪಡಿಸಿ ಹೊರಗಿನವರು ಇರಲಿಲ್ಲ. ನಾವು ಆ ಸ್ಥಳಕ್ಕೆ ತಲುಪುವಾಗ ಮಧ್ಯಾಹ್ನ 2-30 ಆಗಿತ್ತು. ಸಂಜೆ 6-00 ಗಂಟೆಯವರೆಗೆ ಸ್ಥಳದಲ್ಲೇ ಇದ್ದೆವು. ನಂತರದಲ್ಲಿ ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ಮಹಜರಿಗೆ ಆಭರಣಗಳನ್ನು ಅಮಾನತ್ತುಪಡಿಸಿಕೊಂಡ ಸ್ಥಳದಲ್ಲಿಯೇ ಸಹಿ

ಮಾಡಿರುತ್ತೇನೆ. ಮಹಜರನ್ನು ಪೋಲಿಸರು ಎಲ್ಲಿ ಬೆರಳಚ್ಚು ಮಾಡಿದ್ದಾರೆ ಎಂದು ಗೊತ್ತಿಲ್ಲ. ಈಗ ತೋರಿಸಿದ ನಿಪಿ-14 ರಲ್ಲಿ ಎಲ್ಲಿ ಸಹಿ ಮಾಡಿದ್ದೇನೆ ಎಂದು ನಾಲ್ಕು ವರ್ಷ ಆಗಿರುವುದರಿಂದ ನೆನಪಿಗೆ ಬರುತ್ತಿಲ್ಲ. ಒಂದು ಬಾರಿ ಒಂದು ಸಹಿಯನ್ನು ಠಾಣೆಯಲ್ಲಿ ಹಾಕಿದ್ದೆ. ನಿಪಿ.14 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ನೆನಪಿಲ್ಲ. ಪೋಲಿಸರು ನನ್ನ ಸಮಕ್ಷಮ ನಗ, ನಗದು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಕೋರಿಕೆ ಮೇರೆಗೆ ನಿಪಿ.28 ಅನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆಭರಣಗಳಿಗೆ ಪ್ರತ್ಯೇಕ ಗುರುತನ್ನು ಕೊಟ್ಟಿರುವುದಿಲ್ಲ. ಚಿನ್ನದ ಆಭರಣಗಳನ್ನು ತೂಕ ಮಾಡುವಂತೆ ಪೋಲಿಸರು ತಿಳಿಸಿರುತ್ತಾರೆ. ದೂರ ದೂರದಲ್ಲಿ ಸ್ವಲ್ಪ ಜನರು ನಿಂತಿದ್ದರು. ಆ ಸ್ಥಳವು ಸಾರ್ವಜನಿಕ ಸ್ಥಳವಾಗಿರುತ್ತದೆ. ನಾನು ಆ ಸ್ಥಳಕ್ಕೆ ಹೋದದ್ದೇ ಇಲ್ಲ ಎಂದರೆ ಸರಿಯಲ್ಲ. ಪೋಟೋಗಳನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

ನಮ್ಮ ದುರ್ಗಾ ಜ್ಯುವೆಲ್ಲರೀಸ್ ಅಂಗಡಿಯಿಂದ ಪೋಲಿಸ್ ಠಾಣೆಗೆ ಸುಮಾರು 30 ಕಿ.ಮೀ ಆಗುತ್ತದೆ. ಚಾಸಾ4 ರವರ ಮನೆ ನಮ್ಮ ಅಂಗಡಿಯಿಂದ 5-6 ಮನೆಯಿಂದ ದೂರದಲ್ಲಿದೆ. ಚಾಸಾ4 ರವರು ಆರು ವರ್ಷದಿಂದ ಪರಿಚಯ. ಈ ದಿವಸ ನ್ಯಾಯಾಲಯಕ್ಕೆ ಚಾಸಾ4 ಬಂದಿದ್ದಾರೆ ಎಂದರೆ ಸರಿ. ದೂರವಾಣಿ ಮಾಡಿದ ಪೋಲಿಸ್ ಅಧಿಕಾರಿಯ ಹೆಸರು ಗೊತ್ತಿಲ್ಲ. ಮೊದಲು ಚಾಸಾ4 ರವರು ನನ್ನನ್ನು ಬಂಗಾರದ ಒಡವೆ ತೂಕ ಮಾಡುವ ಬಗ್ಗೆ ಹೇಳಿದ್ದರು ಮತ್ತು ಪೋಲಿಸರು ದೂರವಾಣಿ ಮಾಡಿರುತ್ತಾರೆ. ನನ್ನ ಅಂಗಡಿಯಲ್ಲಿ ನಾನು ಒಬ್ಬನೇ ಕೆಲಸ ಮಾಡುತ್ತೇನೆ. ಬೇರೆ ಕಡೆ ಹೋಗಬೇಕಾದರೆ ಅಂಗಡಿಯನ್ನು ಮುಚ್ಚಿ ಹೋಗಬೇಕಾಗುತ್ತದೆ. ಚಿನ್ನದ ಒಡವೆಯನ್ನು ಪರೀಕ್ಷಿಸುವ ಬಗ್ಗೆ ತರಬೇತಿ ಪಡೆದಿದ್ದೇನೆ ಮತ್ತು ಪ್ರಮಾಣ ಪತ್ರ ಇದೆ. ಪ್ರಮಾಣ ಪತ್ರವನ್ನು ಪೋಲಿಸರಿಗೆ ಕೊಟ್ಟಿಲ್ಲ. ಆ ರೀತಿ ನನಗೆ ಯಾವುದೇ ಪರಿಣಿತಿ ಇಲ್ಲ ಎಂದರೆ ಸರಿಯಲ್ಲ. ಗುರ್ಲಾಪುರದಲ್ಲಿ ಸ್ಥಳದ ಅಕ್ಕಪಕ್ಕದ ಜನರು ಸೇರಿದ್ದರು. ಬಂದಿದ್ದ ಪೋಲಿಸರಲ್ಲಿ ಸಬ್ ಇನ್ಸಪೆಕ್ಟರ್ ಹೊರತುಪಡಿಸಿ ಬೇರೆ ಅಧಿಕಾರಿಯ ಪದನಾಮ ಹೇಳಲು ಆಗುವುದಿಲ್ಲ. ಪೋಲಿಸರು ಸ್ಥಳೀಯರ ಸಹಿ ಪಡೆಯಲು ಪ್ರಯತ್ನ ಪಟ್ಟರೋ, ಇಲ್ಲವೋ ಗೊತ್ತಿಲ್ಲ. ಅಲ್ಲಿ ಸಿಕ್ಕಿದ ಆಭರಣಗಳನ್ನು ತೂಕ ಮಾಡುವ ಕೆಲಸ ಬಿಟ್ಟು ಬೇರೆ ಯಾವುದೇ ಪ್ರಕ್ರಿಯೆಯಲ್ಲಿ ಭಾಗವಹಿಸಲಿಲ್ಲ.

ಚಿನ್ನದ ಬೆಲೆಯನ್ನು ಅದರ ಕ್ಯಾರೇಟ್ ಆಧಾರದ ಮೇಲೆ ಗುರುತಿಸುತ್ತೇವೆ. ನಾನು ಪರೀಕ್ಷಿಸಿದ ಚಿನ್ನಾಭರಣಗಳ ಕ್ಯಾರೇಟ್ ನಮೂದು ಮಾಡಿಲ್ಲ. ನಿಪಿ-14 ರ ದಾಖಲೆಗೆ ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಗೊತ್ತಿಲ್ಲ. ನಿಪಿ-28 ನ್ನು ಪೋಲಿಸರು ಹೇಳಿದ

ರೀತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ಗುರ್ಲಾಪುರಕ್ಕೆ ಹೋಗಿಲ್ಲ ಮತ್ತು ಯಾವುದೇ ವಸ್ತುಗಳನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿಲ್ಲ ಮತ್ತು ನಾನು ಅವುಗಳನ್ನು ತೂಕ ಮಾಡಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಕೋರಿಕೆ ಮೇರೆಗೆ ನಿಪಿ-14 ಮತ್ತು ನಿಪಿ-8 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಯಾವ ಆರೋಪಿ ಯಾವ ಆಭರಣವನ್ನು ಹಾಜರುಪಡಿಸಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಚಾಸಾ.4 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.